# ಕಾಮನ್ ಮ್ಯಾನ್ ಕನವರಿಕೆ...

‘ಕೆರೆಬೇಟೆ’ ಸಿನಿಮಾ ಖ್ಯಾತಿಯ ನಟ ಗೌರಿಶಂಕರ್ ಈಗ ‘ಕಾಮನ್ ಮ್ಯಾನ್’ ಆಗಿ ತೆರೆ ಮೇಲೆ ಕಾಣಿಸಿಕೊಳ್ಳುತ್ತಿದ್ದಾರೆ. ಈ ಸಿನಿಮಾ ಅನುಭವಗಳನ್ನು ‘ಸುಧಾ’ದೊಂದಿಗೆ ಹಂಚಿಕೊಂಡಿದ್ದಾರೆ.

■ ಎಸ್ಸೆನ್



◆ **‘ಕಾಮನ್ ಮ್ಯಾನ್’ ಸಿನಿಮಾ ಹಾಗೂ ಸಿನಿಮಾದಲ್ಲಿನ ನಿಮ್ಮ ಪಾತ್ರದ ಕುರಿತಂತೆ...**

‘ಕಾಮನ್ ಮ್ಯಾನ್’ ನನ್ನ ನಾಲ್ಕನೇ ಸಿನಿಮಾ. ಹಿಂದೆ ‘ಜೋಕಾಲಿ’, ‘ರಾಜಹಂಸ’, ‘ಕೆರೆಬೇಟೆ’ ಸಿನಿಮಾಗಳನ್ನು ಮಾಡಿದ್ದೆ. ‘ಕೆರೆಬೇಟೆ’ ಸಿನಿಮಾ ನಿರ್ಮಾಣ ನನ್ನದೇ ಆಗಿತ್ತು, ಜೊತೆಗೆ ನನಗೆ ಹೆಸರು ತಂದುಕೊಟ್ಟಿತು. ಸಿನಿಮಾಗೆ ಹಲವು ಪ್ರಶಸ್ತಿಗಳು ಅರಸಿ ಬಂದವು. ಕಥೆ ವ್ಯಾವಹಾರಿಕವಾಗಿಯೂ ಗೆದ್ದಿತ್ತು.

ಸಿನಿಮಾ ಮಾಡಿದರೆ ಅಚ್ಚುಕಟ್ಟಾಗಿ ಮಾಡಬೇಕು, ಏನಾದರೂ ಸ್ಟ್ರೈಕ್ ಆಗಬೇಕು ಎಂಬುದು ನನ್ನ ನಿರೀಕ್ಷೆ. ಓಂ ಸಾಯಿಪ್ರಕಾಶ್ ಸರ್ ಅವರ ‘ಕಾಮನ್ ಮ್ಯಾನ್’ ಕಥೆ ಕೇಳಿದಾಗ, ನನಗೆ ಈ ಪಾತ್ರ ಬಹಳ ಹತ್ತಿರ ಅನಿಸಿತು. ನಿಜ ಜೀವನದಲ್ಲಿ ವಕೀಲ ಆಗಬೇಕು ಅಂತಿತ್ತು, ಸಾಧ್ಯವಾಗಿರಲಿಲ್ಲ. ಜೊತೆಗೆ, ರಾಜಕೀಯಕ್ಕೆ ಸಂಬಂಧಿಸಿದಂತೆ ಜಾಹೀರಾತು ಕೆಲಸಗಳಲ್ಲಿಯೂ ತೊಡಗಿಕೊಂಡಿದ್ದರಿಂದ ರಾಜಕೀಯದ ಒಡನಾಟ ಒಂದು ಹಂತಕ್ಕಿತ್ತು. ಆ ಎರಡೂ ಸೇರಿದ ಪಾತ್ರ ಈ ಸಿನಿಮಾದಲ್ಲಿ ಸಿಕ್ಕಿತು. ಕಥೆ ಕೂಡ ಬಹಳ ಚೆನ್ನಾಗಿದೆ ಎನ್ನಿಸಿತು. ಈ ಸಿನಿಮಾ ಕೈ ಹಿಡಿದರೆ ನನ್ನ ಪಾಲಿಗೆ ದೊಡ್ಡ ಯಶಸ್ಸು ಸಿಕ್ಕಂತಾಗುತ್ತದೆ.

◆ **ಓಂ ಸಾಯಿಪ್ರಕಾಶ್ ಅವರೊಂದಿಗೆ ಕೆಲಸ ಮಾಡಿದ ಅನುಭವ ಹೇಗಿತ್ತು?**

ಸಾಯಿ ಸರ್ ಅವರಲ್ಲಿ ಒಂದು ಎನರ್ಜಿ, ಶಿಸ್ತಿದೆ. ಸಿನಿಮಾ ಎಂದರೆ ಅವರ ತಲೆಯಲ್ಲಿ ಒಂದು ಜಡ್ಜ್‌ಮೆಂಟ್ ಇರುತ್ತದೆ. ಸಿನಿಮಾದಲ್ಲಿ ಯಾವ ಅಂಶ ಎಷ್ಟಿರಬೇಕು, ಯಾವುದು ಇರಬಾರದು, ಯಾವ ಅಂಶ ಬಹಳ ಮುಖ್ಯ... ಹೀಗೆ ಕೆಲವು ವಿಚಾರಗಳನ್ನು ಅವರ ಅನುಭವದಿಂದ ಅಳೆದು, ಬಹಳ ವೇಗವಾಗಿ ಕೆಲಸ ಮುಗಿಸುತ್ತಾರೆ. ಬೇರೆಯವರು 60 ದಿನಕ್ಕೆ ಮಾಡುವ



# ದಿಗಂತ್ ವಿಮರ್ಶೆ

‘ಕನ್ನಡ ಸಿನಿಮಾರಂಗದಲ್ಲಿ ಒಂದು ರೀತಿ ಅನಿಶ್ಚಿತತೆಯ ವಾತಾವರಣವಿದೆ. ಯಾವುದೇ ರಿಸ್ಕ್ ತೆಗೆದುಕೊಳ್ಳಲು ಹಿಂದೇಟು ಹಾಕುವ ಪರಿಸ್ಥಿತಿಯಿದೆ. ನಿರ್ಮಾಪಕರು ಹೊಸ ಪ್ರಾಜೆಕ್ಟ್‌ಗಳಿಗೆ ಬಂಡವಾಳ ಹೂಡಲು ಹಿಂದೆಮುಂದೆ ನೋಡುತ್ತಿದ್ದಾರೆ’ ಎಂದು ಸ್ಯಾಂಡಲ್‌ವುಡ್‌ನ ಸದ್ಯದ ಪರಿಸ್ಥಿತಿಯ ಬಗ್ಗೆ ವಿಮರ್ಶಿಸಿದ್ದಾರೆ ನಟ ದಿಗಂತ್ ಮಂಚಾಲೆ.

ಕಲಾವಿದರಿಗೆ ಸಿಗುತ್ತಿರುವ ಸಿನಿಮಾ ಅವಕಾಶಗಳ ಕುರಿತು ಸಂದರ್ಶನವೊಂದರಲ್ಲಿ ಬೇಸರ ವ್ಯಕ್ತಪಡಿಸಿರುವ ಅವರು, ‘ಸಿನಿಮಾರಂಗದೊಳಗೇ ಬೇರೆ ಬೇರೆ ಸವಾಲುಗಳಿವೆ. ಹೊಸಬರಿಗಿರಲಿ, ಅನುಭವಿಯಾದ, ಹೆಸರು ಮಾಡಿರುವ ಕಲಾವಿದರಿಗೂ ಅವಕಾಶಗಳು ಕಡಿಮೆಯಾಗಿವೆ’ ಎಂದಿದ್ದಾರೆ. ಈಚೆಗಷ್ಟೆ ದಿಗಂತ್ ಅಭಿನಯಿಸುತ್ತಿರುವ ‘ರುದ್ರಕಾಲ’ ಸಿನಿಮಾ ಘೋಷಣೆಯಾಗಿದೆ. ಕನ್ನಡದೊಂದಿಗೆ ಬೇರೆ ಭಾಷೆಯಲ್ಲೂ ತಮ್ಮ ರೆಕ್ಕೆ ವಿಸ್ತರಿಸುತ್ತಿರುವ